ಓ.ಎಸ್. 334/2017
ಡಿ.ಡಬ್ಲ್ಯೂಃ-1

ದಿನಾಂಕಃ **14.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ**

ನನ್ನ ತಾತನ ಹೆಸರು ಭೈರಪ್ಪ, ಅವರನ್ನು ನಾನು ನೋಡಿರುವುದಿಲ್ಲ. ನನ್ನ ತಂದೆ 2012 ರಲ್ಲಿ ಮರಣಹೊಂದಿರುತ್ತಾರೆ. ಚಿಕ್ಕರಾಮಯ್ಯನವರನ್ನು ನಾನು ನೋಡಿರುವುದಿಲ್ಲ. ಚಿಕ್ಕರಾಮಯ್ಯನವರ ತಂದೆ ಪಾಪಣ್ಣನವರನ್ನು ನಾನು ನೋಡಿರುವುದಿಲ್ಲ. ಸದರಿ ಪಾಪಣ್ಣನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಚಿಕ್ಕರಾಮಯ್ಯನ ಮಕ್ಕಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. 8 ನೇ ಪ್ರತಿವಾದಿಯ ತಂದೆ-ತಾಯಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗಳು ಸೋಮಶೇಖರಯ್ಯನವರ ವಾರಸುದಾರರು. ಸದರಿ ಸೋಮಶೇಖರಯ್ಯನವರ ತಂದೆಯ ಹೆಸರು ವೀರನಾಗಪ್ಪ. ಸದರಿ ವೀರನಾಗಪ್ಪನ ತಂದೆ-ತಾಯಿಯ ಹೆಸರುಗಳು ನನಗೆ ಗೊತ್ತಿರುವುದಿಲ್ಲ.

**2.** ದಾವಾ ಸರ್ವೆ ನಂಬರ್ನ ಮೂಲ ಸರ್ವೆ ನಂ. 98/1 ಆಸ್ತಿ 5 ಎಕರೆ 26 ಗುಂಟೆ ವಿಸ್ತೀರ್ಣ ಇತ್ತು ಎಂದರೆ ಸರಿ. ಸದರಿ ಒಟ್ಟು ಜಮೀನಿನಲ್ಲಿ 10 ಗುಂಟೆ ಭೂ ಪರಿವರ್ತನೆಯಾಗಿ ಪ್ರತ್ಯೇಕವಾಗಿ ಪೋಡಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 98/ಎ1 ಆಸ್ತಿ 5 ಎಕರೆ 16 ಗುಂಟೆ, ಸರ್ವೆ ನಂ. 98/1 ಬಿ ಆಸ್ತಿ 10 ಗುಂಟೆ ಪ್ರತ್ಯೇಕವಾಗಿ ಪೋಡಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 98/1 ರಲ್ಲಿನ 5 ಎಕರೆ 26 ಗುಂಟೆ ಜಮೀನು ಮೂಲತಃ ಯಾರಿಗೆ ಸೇರಿದ್ದು ಎಂಬ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿರುವುದಿಲ್ಲ.

**3.** 1928 ರಲ್ಲಿ ನನ್ನ ತಾತ ಭೈರಪ್ಪ ಸರ್ವೆ ನಂ. 98/1 ರಲ್ಲಿ 3 ಎಕರೆ 28 ಗುಂಟೆ ಜಮೀನನ್ನು ರಾಮಣ್ಣ ತಂದೆ ಚಿಕ್ಕಚೌಡಪ್ಪನವರಿಂದ ಖರೀದಿ ಮಾಡಿರುತ್ತಾರೆ. ಆದರೆ ದಿನಾಂಕ ನನಗೆ ನೆನಪಿರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಕ್ರಯ ಪತ್ರ ನೊಂದಣಿಯಾಗಿರುತ್ತದೆ . ರಾಮಣ್ಣ ತಂದೆ ಚಿಕ್ಕಚೌಡಪ್ಪನವರಿಗೆ ಸರ್ವೆ ನಂ. 98/1 ಆಸ್ತಿ ಸೇರಿತ್ತು ಎಂಬ ಬಗ್ಗೆ ದಾಖಲೆಗಳು ಇರುತ್ತವೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯ ತಹಶೀಲ್ದಾರ್ ಕಛೇರಿಯಲ್ಲಿ ಅರ್ಜಿ ಸಲ್ಲಿಸಿರುತ್ತೇವೆ ಆದರೆ ದಾಖಲೆಗಳು ಇರುವುದಿಲ್ಲ ಎಂದು ಹಿಂಬಹರ ನೀಡಿರುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**4.** ಕಂದಾಯ ಇಲಾಖೆ ಮತ್ತು ಭೂಮಾಪನ ಇಲಾಖೆಯಲ್ಲಿ ಸರ್ವೆ ನಂ.98/1 ಕ್ಕೆ ಸಂಬಂಧಿಸಿದಂತೆ ರಾಮಣ್ಣ ತಂದೆ ಚಿಕ್ಕಚೌಡಪ್ಪನವರ ಹೆಸರಿನಲ್ಲಿ ದಾಖಲೆಗಳು ಇರುತ್ತವೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆಯಲ್ಲಿ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ ನಂತರವೂ ಕಂದಾಯ ಇಲಾಖೆ ಮತ್ತು ಭೂಮಾಪನ ಇಲಾಖೆಯಲ್ಲಿ ಸರ್ವೆ ನಂ.98/1 ಕ್ಕೆ ಸಂಬಂಧಿಸಿದಂತೆ ರಾಮಣ್ಣ ತಂದೆ ಚಿಕ್ಕಚೌಡಪ್ಪನವರ ಹೆಸರಿನಲ್ಲಿ ದಾಖಲೆಗಳು ಇರುತ್ತವೆಯೇ ಎಂದು ನಾವು ಪರಿಶೀಲನೆ ಮಾಡಿರುವುದಿಲ್ಲ.

**5.** ರಾಮಣ್ಣ ತಂದೆ ಚಿಕ್ಕಚೌಡಪ್ಪನವರ ವಂಶಸ್ಥರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಾಮಣ್ಣ ತಂದೆ ಚಿಕ್ಕಚೌಡಪ್ಪನವರಿಗೆ ಗ್ರಾಮದಲ್ಲಿ ಬೇರೆ ಜಮೀನುಗಳು ಇದ್ದ ಬಗ್ಗೆ ನನಗೆ

ಗೊತ್ತಿರುವುದಿಲ್ಲ. ರಾಮಣ್ಣ ಕ್ರಯ ಪತ್ರ ಬರೆದುಕೊಟ್ಟಿರುವ 2 ಎಕರೆ 34 ಗುಂಟೆ ಜಮೀನು ಅವರಿಗೆ ಹೇಗೆ ಬಂದಿರುತ್ತದೆ ಎಂದು ನಾವು ದಾಖಲೆಗಳನ್ನು ನೋಡಿರುವುದಿಲ್ಲ. ನಿಡಿ-5 ರಂತೆ ವಕ್ಕಲಿಗ ಜನಾಂಗಕ್ಕೆ ಸೇರಿದ ರಾಮಣ್ಣ ತಂದೆ ಚಿಕ್ಕಚೌಡಪ್ಪ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂ. 98/1 ರಲ್ಲಿ ನಿಡಿ-5 ಕ್ಕೆ ಒಳಪಟ್ಟಿರುವ ಜಮೀನನ್ನು ಹೊರತು ಪಡಿಸಿ ಉಳಿಕೆ ಜಮೀನು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

**6.** 8 ನೇ ಪ್ರತಿವಾದಿಯ ತಂದೆ ಚಿಕ್ಕರಾಮಣ್ಣ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಚಿಕ್ಕರಾಮಣ್ಣನ ತಂದೆಯೇ ಪಾಪಣ್ಣ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾತನಿಗೆ ಸರ್ವೆ ನಂ. 98/1 ರಲ್ಲಿ ನಿಡಿ-5 ರಂತೆ ಜಮೀನನ್ನು ಮಾರಾಟ ಮಾಡಿರುವ ರಾಮಣ್ಣ ತಂದೆ ಚಿಕ್ಕಚೌಡಪ್ಪ ಮತ್ತು ಚಿಕ್ಕರಾಮಯ್ಯ ತಂದೆ ಪಾಪಣ್ಣನವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ರಾಮಣ್ಣ ತಂದೆ ಚಿಕ್ಕಚೌಡಪ್ಪ ಒಕ್ಕಲಿಗ ಜನಾಂಗಕ್ಕೆ ಸೇರಿರುತ್ತಾರೆ , ಚಿಕ್ಕರಾಮಯ್ಯ ತಂದೆ ಪಾಪಣ್ಣನವರು ವೀರಶೈವ ಜನಾಂಗಕ್ಕೆ ಸೇರಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**7.** ಸರ್ವೆ ನಂ. 98/1 ರಲ್ಲಿನ 5 ಎಕರೆ 26 ಗುಂಟೆ ಜಮೀನು ಮೂಲತಃ ಚಿಕ್ಕರಾಮಯ್ಯ ತಂದೆ ಪಾಪಣ್ಣನವರಿಗೆ ಸೇರಿದ್ದಂತಹ ಜಮೀನು ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98/1 ಕ್ಕೆ ಸಂಬಂಧಿಸಿದ ಎಲ್ಲಾ ಕಂದಾಯ ದಾಖಲೆಗಳು ಚಿಕ್ಕರಾಮಯ್ಯ ತಂದೆ ಪಾಪಣ್ಣನವರ ಹೆಸರಿನಲ್ಲಿತ್ತು ಎಂದು ಸೂಚಿಸುವುದು ಸರಿಯಲ್ಲ. ನಿಡಿ-5 ರಲ್ಲಿ ನಮೂದು

ಮಾಡಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಸೂಚಿಸುವುದು ಸರಿಯಲ್ಲ. ನಿಡಿ-5 ರಲ್ಲಿ ನಮೂದು ಮಾಡಿರುವ ಚಕ್ಕುಬಂಧಿ ದಾವಾ ಸರ್ವೆ ನಂ. 98 ಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**8.** ನನ್ನ ತಾತ ಸರ್ವೆ ನಂ. 98/1 ರಲ್ಲಿ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ಕಂದಾಯ ದಾಖಲೆಗಳಲ್ಲಿ ನಮೂದಾಗಿರುತ್ತವೆ. ಆದರೆ ಯಾವ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಪಹಣಿಯಲ್ಲಿ ಮತ್ತು ಇತರೆ ದಾಖಲೆಗಳಲ್ಲಿ ನೋಡಿರುತ್ತೇನೆ ಆದರೆ ಯಾವ ದಾಖಲೆಗಳಲ್ಲಿ ನೋಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ.

9. ನಿಡಿ-5 ರಂತೆ ಕ್ರಯಪತ್ರ ಬರೆದುಕೊಟ್ಟಂತಹ ವ್ಯಕ್ತಿಗೆ ಸರ್ವೆ ನಂ 98/1 ನ್ನು ಮಾರಾಟ ಮಾಡಲು ಹಕ್ಕು ಇಲ್ಲದೇ ಇದ್ದ ಕಾರಣ ನಿಡಿ-5 ರಲ್ಲಿ ಖರೀದಿ ಮಾಡಿದ ವ್ಯಕ್ತಿಗೆ ಯಾವುದೇ ಹಕ್ಕು ವರ್ಗಾವಣೆಯಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿಡಿ-5 ರಲ್ಲಿ ಮಾರಾಟ ಮಾಡಿದ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟಗಾರರಿಗೆ ಹಕ್ಕು ಇಲ್ಲದ ಕಾರಣ ಖರೀದಿ ಮಾಡಿದ ವ್ಯಕ್ತಿಯ ಹೆಸರಿಗೆ ಯಾವುದೇ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**10.** ನಿಮ್ಮ ತಂದೆ ಶಾನುಭೋಗರಾಗಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ತಾತ ಶಾನುಭೋಗರಾಗಿದ್ದರು ಎಂದು ಉತ್ತರಿಸಿ, ಮುಂದುವರೆದು ನನ್ನ ತಂದೆಯ ತಂದೆ ಶಾನುಭೋಗರಾಗಿರಲಿಲ್ಲ, ನನ್ನ ತಾಯಿಯ ತಂದೆ ಶಾನುಭೋಗರಾಗಿದ್ದರು ಎಂದು ಉತ್ತರಿಸಿರುತ್ತಾರೆ. ನನ್ನ ತಾತ ಹುಣಸವಾಡಿ ಗ್ರಾಮಕ್ಕೆ ಶಾನುಭೋಗರಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ. ಆದರೆ ನನ್ನ ತಾತ ಯಾವ ಗ್ರಾಮಕ್ಕೆ ಶಾನುಭೋಗರಾಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಿಮ್ಮ ತಂದೆ ಮತ್ತು ತಾತ ವಿದ್ಯಾವಂತರಾಗಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ತಂದೆ ವಿದ್ಯಾವಂತರಾಗಿದ್ದರು ನನ್ನ ತಾತನ ವಿದ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**11.** ವಾದಿ ಗಂಗಮ್ಮನವರನ್ನು ನೋಡಿರುತ್ತೇನೆ. 1 ನೇ ವಾದಿಗೆ ಸೋಮಶೇಖರ್‌ರವರು ಮರಣಶಾಸನವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಮರಣಶಾಸನದ ಪ್ರತಿಯನ್ನು ನಾನು ನೋಡಿರುತ್ತೇನೆ. ಆದರೆ ಎಷ್ಟು ಜಮೀನಿಗೆ ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ವಾದಿ, 8 ನೇ ಪ್ರತಿವಾದಿ ಮತ್ತು ಅವರ ತಂದೆಯ ಸಂಬಂಧದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**12.** ನನ್ನ ತಂದೆ ನಾಗಣ್ಣ ಎಂಬುವವರಿಗೆ 3 ಗುಂಟೆ ಮಾರಾಟ ಮಾಡಿರುತ್ತಾರೆ. ಸದರಿ 3 ಗುಂಟೆಯನ್ನು ಯಾವ ಸರ್ವೆ ನಂಬರ್‌ನಲ್ಲಿ ಪೋಡಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ 3 ಗುಂಟೆಯ ಚಕ್ಕುಬಂಧಿ ಹೇಳಲು ಆಗುವುದಿಲ್ಲ. ನನ್ನ ತಂದೆ 37 ಗುಂಟೆ ಜಮೀನನ್ನು ಉಳಿಸಿಕೊಂಡಿರುತ್ತಾರೆ. 37 ಗುಂಟೆ ಜಮೀನಿನ ಪೂರ್ವಕ್ಕೆ-ವಾದಿಯ

ಜಮೀನು, ಪಶ್ಚಿಮಕ್ಕೆ-ಲಿಂಗಮ್ಮನ ಜಮೀನು, ಉತ್ತರಕ್ಕೆ-98/1 ಎ1 ರಲ್ಲಿನ ನನ್ನ ಜಮೀನು, ದಕ್ಷಿಣಕ್ಕೆ-ಪಾರ್ವತಮ್ಮನವರ ಜಮೀನು. 98/1 ಎ1 ಜಮೀನಿನ ವಿಸ್ತೀರ್ಣ ಮತ್ತು ಚಕ್ಕುಬಂಧಿ ನೆನಪಿರುವುದಿಲ್ಲ. ನಮ್ಮ ತಂದೆಯ ಮರಣಾನಂತರ ನಮ್ಮ ತಂದೆಯ ಎಲ್ಲಾ ಆಸ್ತಿಗಳನ್ನು ನಾವು ಅನುಭವಿಸುತ್ತಿರುತ್ತೇವೆ. ನಾವೇ ಸದರಿ ಸ್ವತ್ತುಗಳನ್ನು ವೈಯ್ಯಕ್ತಿಕವಾಗಿ ನೋಡಿಕೊಳ್ಳುತ್ತಿದ್ದೇವೆ. ನಮ್ಮ ತಂದೆಯ ಮರಣಾನಂತರ ನಮ್ಮ ತಂದೆಯ ಎಲ್ಲಾ ಆಸ್ತಿಗಳ ದಾಖಲೆಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇವೆ ಆದರೆ ಸರ್ವೆ ನಂ. 98/1 ರಲ್ಲಿನ ಆಸ್ತಿ ವರ್ಗಾವಣೆಯಾಗಿರುವುದಿಲ್ಲ. ನನ್ನ ತಾತನ ಮರಣಾನಂತರ ಸರ್ವೆ ನಂ. 98/1 ರಲ್ಲಿನ ಜಮೀನಿಗೆ ಸಂಬಂಧಿಸಿದಂತೆ ಖಾತೆ ನನ್ನ ತಂದೆಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮತ್ತು ಪಹಣಿ ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**13.** 3 ಗುಂಟೆಯ ಬದಲಾಗಿ 1 ಎಕರೆ 34 ಗುಂಟೆ ಜಮೀನು ಪೋಡಿಯಾಗಿರುತ್ತದೆ ಎಂಬುದನ್ನು ಪ್ರಶ್ನಿಸಿ ಉಪ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಆದೇಶವಾಗಿರುತ್ತದೆ. ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**14.** ನಾವು ಸರ್ವೆ ನಂ. 98/1 ಎ2 ರಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ಹೇಳಿರುವಂತಹ 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಗಳು ನನ್ನ ತಾತನ ಹೆಸರಿನಲ್ಲಿ ಇರುತ್ತವೆ. ನನ್ನ ತಂದೆ ಮತ್ತು ನಮ್ಮ ಹೆಸರಿನಲ್ಲಿ ದಾಖಲೆಗಳು ಇರುವುದಿಲ್ಲ. ನನ್ನ

ತಾತ ತೀರಿಕೊಂಡ ದಿನಾಂಕ ನೆನಪಿರುವುದಿಲ್ಲ, ಆದರೆ ದಾಖಲೆ ಹಾಜರು ಪಡಿಸಿರುತ್ತೇನೆ. ನಿಮ್ಮ ತಾತನ ಮರಣ ಪ್ರಮಾಣ ಪತ್ರ ಹಾಜರು ಪಡಿಸಿರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**15.** ನಮ್ಮ ಎಲ್ಲಾ ಆಸ್ತಿಗಳಿಗೆ ಕಂದಾಯ ಪಾವತಿ ಮಾಡುತ್ತಿದ್ದೇವೆ. ಸರ್ವೆನಂ. 98/1 ರಲ್ಲಿನ ಜಮೀನಿಗೆ ನನ್ನ ತಾತ ಕಂದಾಯ ಪಾವತಿ ಮಾಡಿರುತ್ತಾರೆ. ನನ್ನ ತಂದೆ ಕಂದಾಯ ಪಾವತಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆದರೆ ನಾನು ಕಂದಾಯ ಪಾವತಿ ಮಾಡಿರುವುದಿಲ್ಲ. ಸರ್ವೆ ನಂ. 98/1 ರಲ್ಲಿ ನನ್ನ ತಾತನಿಗೂ ಮತ್ತು ನಮ್ಮ ಕುಟುಂಬಕ್ಕೆ ಆಸ್ತಿ ಇಲ್ಲದೇ ಇರುವ ಕಾರಣ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ವಾದಿಗಳಿಗೆ ಸೇರಿರುತ್ತದೆ ಎಂದು ವಾದಿಗಳೇ ನನಗೆ ಹೇಳಿ ಬರೆಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವ ವಿಚಾರ ಎಂದು ಹೇಳಿರುತ್ತಾರೆ. ದಾವಾ ಸ್ವತ್ತು 1 ನೇ ವಾದಿಗೆ ಅವರ ಗಂಡ ವೀರನಾಗಪ್ಪನ ಕಡೆಯಿಂದ ಬಂದಂತಹ ಸ್ವತ್ತಾಗಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸೋಮಶೇಖರ್‌ರವರಿಗೆ ಮರಣಶಾಸನ ಬರೆಯಲು ಯಾವುದೇ ಹಕ್ಕು ಇರಲಿಲ್ಲ ಮತ್ತು ಅವರು ಯಾವುದೇ ಮರಣ ಶಾಸನ ಬರೆದುಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವೀರನಾಗಪ್ಪನಿಗೆ ಯಾವುದೇ ಹಕ್ಕು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**16.** 8 ನೇ ಪ್ರತಿವಾದಿಗೆ ಸೇರಿದಂತಹ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನಾನು ವಾದಿಗಳು, 1 ರಿಂದ 4 , 6 ಮತ್ತು 7 ನೇ ಪ್ರತಿವಾದಿಗಳು ಶಾಮೀಲಾಗಿ ಈ ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98/1 ರಲ್ಲಿನ ಸಂಪೂರ್ಣ ಆಸ್ತಿ ಚಿಕ್ಕರಾಮಯ್ಯನವರ ಸ್ವಾಧೀನದಲ್ಲಿದ್ದು ಅವರ ನಂತರ 8 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 8 ನೇ ಪ್ರತಿವಾದಿ , 8 ನೇ ಪ್ರತಿವಾದಿಯ ಗಂಡ ಮತ್ತು ಮಕ್ಕಳು ಸರ್ವೆ ನಂ. 98/1 ಎ ರಲ್ಲಿ ದೇವಸ್ಥಾನ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 98/1 ರಲ್ಲಿ ಸರ್ವೆ ನಂ. 98/1 ಎ 1 ಮತ್ತು ಸರ್ವೆ ನಂ. 98/1 ಎ 2 ಎಂದು ತಪ್ಪಾಗಿ ಪೋಡಿ ಮಾಡಿರುತ್ತಾರೆ ಎಂದರೆ ಸರಿ.

**17.** 8 ನೇ ಪ್ರತಿವಾದಿ ಅನಕ್ಷರಸ್ಥರಾಗಿರುವುದನ್ನು ದುರುಪಯೋಗ ಪಡಿಸಿಕೊಂಡು ನಾವು ಮತ್ತು ನಮ್ಮ ತಂದೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ವಾದಿಗಳಿಗೆ ಮತ್ತು 1 ರಿಂದ 7 ನೇ ಪ್ರತಿವಾದಿಗಳಿಗೆ ಸರ್ವೆ ನಂ. 98/1 ರಲ್ಲಿನ 5 ಎಕರೆ 16 ಗುಂಟೆ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98 ಕ್ಕೆ ಸಂಬಂಧಿಸಿದಂತೆ ತಪ್ಪಾಗಿ ಪೋಡಿಯಾಗಿರುವುದರ ಆಧಾರದ ಮೇರೆಗೆ ಪಹಣಿಗಳು ಬದಲಾವಣೆಯಾಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು 8 ನೇ ಪ್ರತಿವಾದಿಗೆ ಸೇರಿದ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ನಾನು ಜನ್ಮತಃ ಹುಣಸವಾಡಿಯಲ್ಲಿಯೇ ವಾಸವಾಗಿರುತ್ತೇನೆ.

**18.** ನಾನು ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ